

ಮಕ್ಕಳಿಬ್ಬರು, ಸೊಸೆ ಎಲ್ಲಾ ಕೂತು ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ನಮ್ಮ ಕಿರಿ ಮಗನಿಗೆ ನಿಮ್ಮ ನಾದಿನಿಯ ಮದುವೆ ಮಾಡಿಕೊಳ್ಳುವುದೆಂದು. ನನ್ನ ಕಿರಿಮಗನಿಗೂ ಈಗ ಇಪ್ಪತ್ತೆರಡು ವರ್ಷವಾಯ್ತು. ನಿಮ್ಮ ನಾದಿನಿಗೆ ಈಗ ಇಪ್ಪತ್ತಾಗಿರಬೇಕು! ಬಾಲ್ಯದಲ್ಲಿ ಅವರಿಬ್ಬರೂ ಕಾಡುಮೇಡಿನಲ್ಲಿ ಆಡು ಆಕಳು ಕುರಿ ಅಂಥ ಒಟ್ಟಿಗೆ ಕಾಯಲು ಹೋಗುತ್ತಿದ್ದವರು. ಅವರೂ ಒಬ್ಬರಿಗೊಬ್ಬರು ಹೊಸಬರಲ್ಲ. ಏನೋ ನಿಮ್ಮ ನಾದಿನಿಗೆ ಬೇಗ ಮದುವೆ ಆಗಿ ಆಗಬಾರದ ದುರಂತ ಆಗಿ ಹೋಯ್ತು. ಅದನ್ನೆಲ್ಲಾ ಈಗ ನೆನೆಯೋದು ಬ್ಯಾಡ. ನೀವು ಇದಕ್ಕೆ ಒಪ್ಪಿಗೆ ಕೊಟ್ಟರೆ ನಾವು ಮುಂದುವರಿಯುತ್ತೇವೆ. ನಿಮಗೆ ಇದರಿಂದ ಬೇಸರವಾಗುವುದಾದರೆ ಈ ಮಾತನ್ನು ನಾವು ಇಲ್ಲಿಗೇ ಬಿಟ್ಟು ಬಿಡುತ್ತೇವೆ' ಎಂದರು. ಅದಕ್ಕೆ ಅವರ ಪತ್ನಿ ಚೆನ್ನಮ್ಮನೂ ದನಿಗೂಡಿಸಿದರು.

ಮಾವನಿಗೆ ಕ್ಷಣ ಅವರ ಮಾತಿಗೆ ಏನು ಹೇಳುವುದು ಎಂಬುದು ಗೊತ್ತಾಗದೆ ಮೌನವಾದರು.

ಮಾವನವರಿಗಾಗಲೀ, ನಾನಾಗಲೀ ಇದನ್ನು